**4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ದಿನಾಂಕ 06.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**1 ನೇ ಪ್ರತಿವಾದಿ ಪರವಾಗಿ ಪಾಟೀ ಸವಾಲು ಶ್ರೀ ಟಿ ಜಿ ಎಸ್ ವಕೀಲರಿಂದಃ-**

ನಾನು ದಾವಾ ಆಸ್ತಿಯನ್ನು ನಮೂನೆ 3 ಮತ್ತು 4 ನು ಪರಿಶೀಲಿಸಿದ ನಂತರ ಖರೀದಿ ಮಾಡಿರುತ್ತೇನೆ. ನಿಪಿ-5 ಮತ್ತು 6 ದಾವಾ ಆಸ್ತಿಯ ಮಾಲೀಕತ್ವವನ್ನು ತೋರಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಮಂಡಲ ಪಂಚಾಯತಿಗೆ ಸೇರಿದ ಸ್ವತ್ತಾಗಿರುತ್ತದೆ. ದಾವಾ ಆಸ್ತಿಯು ಪಂಚಾಯತಿಯಿಂದ ಧನಲಕ್ಷ್ಮಿ ರವರಿಗೆ ನೋಂದಣಿ ಆಗಿರುತ್ತದೆ. ಸದರಿ ವಿಚಾರ ಕುರಿತಾಗಿ ದಾಖಲೆಯನ್ನು ನ್ಯಾಯಾಯಾಲಯಕ್ಕೆ

This is a True Copy of the Court Records Online. Authenticated @ districts.ecourtsindia.com/cnr/KASM310003582024/truecopy/order-4.pdf

ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ ಮತ್ತು ನನ್ನ ಬಳಿ ಇರುವುದಿಲ್ಲ.

2. ದಾವಾ ಆಸ್ತಿಯನ್ನು ಮಾರಾಟ ಮಾಡಲು ಧನಲಕ್ಷ್ಮಿಗೆ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ರ ಮೇಲೆ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನಾನು ಹಾಜರುಪಡಿಸಿರುವ ನಿಪಿ-5 ಮತ್ತು 6 ಹಾಗೂ ನಿಪಿ-8 ರಲ್ಲಿ ನಮುದಾಗಿರುವ ಚಕ್ಕುಬಂದಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ರಲ್ಲಿ ನಮುದಾಗಿರುವ ಸ್ವತ್ತು ಮತ್ತು ನಿಪಿ-8 ರಲ್ಲಿ ನಮುದಾಗಿರುವ ಸ್ವತ್ತು ಬೇರೆ ಬೇರೆ
ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಸದರಿ ಸ್ವತ್ತಿನ ಭೌತಿಕ ಸ್ವಾಧೀನದಲ್ಲಿ ಧನಲಕ್ಷ್ಮಿ ಇರಲಿಲ್ಲ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯು ನಗರಸಭಾ ವ್ಯಾಪ್ತಿಯ ಅಡಿಯಲ್ಲಿ ಬರುತ್ತದೆ ಮತ್ತು ನಗರಸಭೆಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ . ನಗರಸಭೆಗೆ ಸೇರಿದ ಸ್ವತ್ತನ್ನು ನನ್ನದು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಕಾನೂನುಬದ್ಧ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕೌನ್ಸಿಲರು ದಾವಾ ಆಸ್ತಿಯಲ್ಲಿ ಜೆಸಿಬಿ ತಂದು ಟ್ರಂಚನ್ನು ಮಾಡಿ ನನ್ನ ಸ್ವಾಧೀನಕ್ಕೆ ತೊಂದರೆಯನ್ನು ನೀಡಿರುತ್ತಾರೆ. ಸದರಿ ಟ್ರಂಚನ್ನು ಯಾರಿಗೆ ಸೇರಿದ ಎಂಬುದು ನನಗೆ ಗೊತ್ತಿಲ್ಲ. ಸದರಿ ಜೆಸಿಬಿ ನಂಬರು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯ ಮಾಲೀಕತ್ವವನ್ನು ಪಡೆಯಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಗರಸಭೆಗೆ ತಪ್ಪು ಮಾಹಿತಿ ನೀಡಿ ದಾವಾ ಆಸ್ತಿಯ ಖಾತೆ ಬದಲಾವಣೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆ.ನ್ಯಾಸಾ.ಹೇ.ನನ್ನ ಉಕ್ತ ಲೇಖನದಂತೆ ಬೆ.ಮಾಡಲಾಯಿತು).

This is a True Copy of the Court Records Online. Authenticated @ districts.ecourtsindia.com/cnr/KASM310003582024/truecopy/order-4.pdf

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಗಿರಿಜಾ ಎನ್)
4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಭದ್ರಾವತಿ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KASM310003582024/truecopy/order-4.pdf